JULY O8, 2025

AKASHAVANI - DHARWAD

PRADESH SAMACHARA (KANNADA) 7.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು:

- ಕೊವಿಡ್ ಲಸಿಕೆಯಿಂದ, ಯುವಜನರಲ್ಲಿ ಹೃದಯಾಘಾತ; ಯಾವುದೇ ಆಧಾರವಿಲ್ಲ – ತಜ್ಞರ ಸಮಿತಿ, ವರದಿ.
- ಸರ್ಕಾರಿ ಶಾಲಾ ಶಿಕ್ಷಕರ, ಹಾಜರಾತಿ; ಫೇಸ್ ರೀಡಿಂಗ್ ಯೋಜನೆ, 'ಪ್ರತ್ಯಕ್ಷ'ಕ್ಕೆ, ಗದಗನಲ್ಲಿ ಚಾಲನೆ.
- ಭೂ ದಾಖಲೆಗಳ ಡಿಜಿಟಲೀಕರಣ; ಭೂ ಸುರಕ್ಷಾ ಯೋಜನೆ ಅನುಷ್ಠಾನದಲ್ಲಿ, ದಾವಣಗೆರೆ ಜಿಲ್ಲೆ, ರಾಜ್ಯಕ್ಕೆ ಪ್ರಥಮ.
- ಕೋಲಾರ ಜಿಲ್ಲೆ ಟಮಕದ, ತೋಟಗಾರಿಕೆ ಮಹಾವಿದ್ಯಾಲಯದಿಂದ, ಹಲಸಿನ ಮೂರು ಹೊಸ ತಳಿಗಳ, ಅಭಿವೃದ್ಧಿ.

<><><>

ಈಗ ವಾರ್ತೆಗಳ ವಿವರ

<><><>

ಕೋವಿಡ್ ಲಸಿಕೆ ಪಡೆದವರಲ್ಲಿ, ಹೃದಯಾಘಾತ ಸಂಭವಿಸುತ್ತವೆ ಎಂಬುದಕ್ಕೆ ಆಧಾರಗಳಿಲ್ಲ ಎಂದು, ತಜ್ಞರ ಸಮಿತಿ ವರದಿ ತಿಳಿಸಿದೆ ಎಂದು, ಆರೋಗ್ಯ ಖಾತೆ ಸಚಿವ ದಿನೇಶ ಗುಂಡೂರಾವ, ಸ್ಪಷ್ಟ ಪಡಿಸಿದ್ದಾರೆ. ಬೆಂಗಳೂರಿನಲ್ಲಿ ಮಾತನಾಡಿದ ಸಚಿವರು, ತಜ್ಞರ ಸಮಿತಿ, ಹೃದಯಾಘಾತಕ್ಕೆ ಧೂಮಪಾನ, ಆಹಾರ ಹಾಗೂ ಜೀವನಶೈಲಿ ಬದಲಾವಣೆ, ಮಾಲಿನ್ಯ ಸಹ ಕಾರಣವಾಗಿದೆ ಎಂದು, ವರದಿ ಸಲ್ಲಿಸಿದೆ ಎಂದರು. ಆರೋಗ್ಯ ಇಲಾಖೆ ಹೃದಯದ ಆರೋಗ್ಯದ ಬಗ್ಗೆ ಜನ ಜಾಗ್ರತಿ ನಡೆಸಲಿದೆ. ಖಾಸಗಿ ಸಂಸ್ಥೆಗಳು, ತಮ್ಮ ಉದ್ಯೋಗಿಗಳ ಸಂಪೂರ್ಣ ಆರೋಗ್ಯ ತಪಾಸಣೆ ವರ್ಷಕ್ಕೊಮ್ಮೆ ನಡೆಸುವುದು, ಕಡ್ಡಾಯ ಗೊಳಿಸಲಾಗುವುದು, ಎಂದು ಸಚಿವ ದಿನೇಶ ಹೇಳಿದರು.

<><><>

ರಾಜ್ಯದ 57 ಲಕ್ಷ ಶಾಲಾ ಮಕ್ಕಳ, ಹಾಜರಾತಿ ದಾಖಲಿಸಲು, 'ಫೇಸ್ ರೀಡಿಂಗ್' ಕಡ್ಡಾಯ ಗೊಳಿಸಲಾಗಿದೆ; ಮುಂಬರುವ, ಒಂದು ತಿಂಗಳಲ್ಲಿ, ಅಧಿಕೃತ ಚಾಲನೆ ನೀಡಲಾಗುವುದು ಎಂದು, ಶಾಲಾ ಶಿಕ್ಷಣ ಖಾತೆ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ.

ಗದಗನಲ್ಲಿ, ಶಿಕ್ಷಕರ ಫೇಸ್ ರೀಡಿಂಗ್ ಹಾಜರಾತಿ ಪ್ರಕ್ರಿಯೆ – 'ಪ್ರತ್ಯಕ್ಷ'ಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು. ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲು, ತಮ್ಮ ಇಲಾಖೆ ಬದ್ಧವಾಗಿದೆ ಎಂದರು. ಜಿಲ್ಲಾ ಉಸ್ತುವಾರಿ ಖಾತೆ ಸಚಿವ ಎಚ್.ಕೆ ಪಾಟೀಲ ಮಾತನಾಡಿ, ತಂತ್ರಜ್ಞಾನದ ಸಮರ್ಪಕ ಬಳಕೆಗೆ, ಶಿಕ್ಷಣ ಇಲಾಖೆ ಒತ್ತು ನೀಡಿದೆ, ಎಂದರು.

<><><>

ಕೊಪ್ಪಳ ಜಿಲ್ಲೆ, ಯಲಬುರ್ಗಾ ತಾಲೂಕು, ಹಿರೇವಂಕಲಕುಂಟಾ ಗ್ರಾಮದಲ್ಲಿ, ನೂತನ ಸರ್ಕಾರಿ ಬಾಲಕಿಯರ ಪ್ರೌಢ ಶಾಲೆ ಹಾಗೂ ಸರ್ಕಾರಿ ಪದವಿ ಪೂರ್ವ ಮಹಾವಿದ್ಯಾಲಯದ ಕಟ್ಟಡವನ್ನು ಸಚಿವ ಎಸ್.ಮಧು ಬಂಗಾರಪ್ಪ ಉದ್ಘಾಟಿಸಿ, ಮಾತನಾಡಿದರು.

<><><>

ಮಧು ಬಂಗಾರಪ್ಪ ಧ್ವನಿ 36 ಸೆಕೆಂದುಗಳು

<><><>

ಮಕ್ಕಳಿಗೆ ತುರ್ತು ಸೇವೆ ಒದಗಿಸುವ, ದಿನದ 24 ಗಂಟೆಯೂ ಕಾರ್ಯನಿರ್ವಹಿಸುವ ಉಚಿತ ಮಕ್ಕಳ ಸಹಾಯವಾಣಿ ಸಂಖ್ಯೆ 1098 ರ ಬಗ್ಗೆ ಎಲ್ಲ ಸರಕಾರಿ ಶಾಲೆಗಳು, ಪದವಿ ಪೂರ್ವ ಕಾಲೇಜುಗಳ ಸೂಕ್ತ ಸ್ಥಳದ ಮೇಲೆ ಗೋಡೆ ಬರಹ ಬರೆಸುವಂತೆ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸೂಚನೆ ನೀಡಿದೆ.

<><><>

ಪ್ರಧಾನಮಂತ್ರಿಗಳ, 15 ಅಂಶಗಳ ಕಾರ್ಯಕ್ರಮಗಳನ್ನು, ವಿವಿಧ ಇಲಾಖೆಗಳ ಸಹಯೋಗದಲ್ಲಿ, ಅಲ್ಪಸಂಖ್ಯಾತ ಸಮುದಾಯಗಳ ಅಭ್ಯುದಯಕ್ಕಾಗಿ ಜಾರಿಗೊಳಿಸಲಾಗಿದೆ ಎಂದು, ಕೋಲಾರ ಜಿಲ್ಲಾಧಿಕಾರಿ ಎಂ.ಆರ್. ರವಿ ತಿಳಿಸಿದ್ದಾರೆ. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ, ಅವರು ಸಭೆ ನಡೆಸಿದರು. ಅಲ್ಪ ಸಂಖ್ಯಾತರಿಗೆ, ಶೈಕ್ಷಣಿಕ ಸೌಲಭ್ಯಗಳ ವಿಸ್ತರಣೆ, ತಾಂತ್ರಿಕ ತರಬೇತಿ, ಕೌಶಲಾಭಿವೃದ್ಧಿ, ಆರ್ಥಿಕ ಬಲವರ್ಧನೆಗೆ, ಸಾಲ ಸೌಲಭ್ಯ, ಜೀವನ ಗುಣಮಟ್ಟ ಸುಧಾರಣೆ, ವಸತಿ ಯೋಜನೆ ಸಹಿತ, ವಿವಿಧ ಕಾರ್ಯಕ್ರಮಗಳನ್ನು, ಕಾಲಮಿತಿಯಲ್ಲಿ, ಅರ್ಹ ಫಲಾನುಭವಿಗಳಿಗೆ ತಲುಪಿಸುವಂತೆ, ಜಿಲ್ಲಾಡಳಿತದ ಅಧಿಕಾರಿಗಳಿಗೆ ಸೂಚಿಸಿದರು.

<><><>

ರಾಯಚೂರು ಜಿಲ್ಲೆಯ ಐದು ತಾಲೂಕುಗಳಲ್ಲಿ, ಕೇಂದ್ರ ಪುರಸ್ಕೃತ ಜಲ ಜೀವನ ಮಿಶನ್ ಯೋಜನೆಯಡಿ, 832 ಕಾಮಗಾರಿಗಳು ಪೂರ್ಣಗೊಂಡಿವೆ ಎಂದು, ಜಿಲ್ಲಾ ಪಂಚಾಯಿತಿ, ಸಿ.ಇ.ಓ. ರಾಹುಲ ತುಕಾರಾಂ ಪಾಂಡ್ವೆ ತಿಳಿಸಿದ್ದಾರೆ. ಜಿಲ್ಲಾ ಪಂಚಾಯಿತಿಯ, ಜಲ ನಿರ್ಮಲ ಸಭಾಂಗಣದಲ್ಲಿ ಜಲ ಜೀವನ ಮಿಶನ್ ಕಾಮಗಾರಿಯ ಪ್ರಗತಿ ಪರಿಶೀಲಿಸಿ, ಅವರು ಮಾತನಾಡಿದರು. ಯೋಜನೆ ಅಡಿ, ಒಟ್ಟು ಸಾವಿರದ 223 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ಎಂದರು.

<><><>

ರಾಜ್ಯ ಸರ್ಕಾರ, ಮಳೆ ಹಾನಿಯ ಸಮೀಕ್ಷೆ ನಡೆಸಿ, ರೈತರಿಗೆ ಸೂಕ್ತ ಪರಿಹಾರ ನೀಡಬೇಕು ಎಂದು, ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ, ಆಗ್ರಹಿಸಿದ್ದಾರೆ. ಹಾಸನ ಜಿಲ್ಲೆ, ಆಲೂರು ತಾಲೂಕು, ಕರಿಗನಹಳ್ಳಿ ಸೇರಿದಂತೆ, ವಿವಿಧ ಗ್ರಾಮಗಳಿಗೆ ಭೇಟಿ ನೀಡಿ, ಬೆಳೆ ಹಾನಿ ವೀಕ್ಷಿಸಿದರು. ರೈತರ ಅಹವಾಲು ಆಲಿಸಿದರು.

ಕಳಪೆ ಬಿತ್ತನೆ ಬೀಜಗಳಿಂದಲೂ ಬೆಳೆ ಹಾನಿಯಾಗಿದ್ದು, ಈ ಕುರಿತು ರಾಜ್ಯ ಸರ್ಕಾರ ತನಿಖೆ ನಡೆಸಬೇಕು ಎಂದು, ಆರ್. ಅಶೋಕ ಒತ್ತಾಯಿಸಿದರು.

<><><>

ನಾಡ ಹಬ್ಬ, ಮೈಸೂರು ದಸರಾ ಸಂದರ್ಭದಲ್ಲಿ, ವಿಶೇಷ ವೈಮಾನಿಕ ಪ್ರದರ್ಶನ ಆಯೋಜನೆಗೆ, ರಾಜ್ಯ ಸರ್ಕಾರ ನಿರ್ಧರಿಸಿದೆ. ಈ ನಿಟ್ಟಿನಲ್ಲಿ, ಕೇಂದ್ರ ರಕ್ಷಣಾ ಖಾತೆ ಸಚಿವ ರಾಜನಾಥ ಸಿಂಗ್ ಅವರ ಜೊತೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಇಂದು ಹೊಸ ದಿಲ್ಲಿಯಲ್ಲಿ ಚರ್ಚೆ ನಡೆಸಲಿದ್ದಾರೆ ಎಂದು, ವರದಿ ತಿಳಿಸಿದೆ.

<><><>

ಈಗ ಪ್ರಕಟಣೆ, ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು

(1 ನಿಮಿಷ 15 ಸಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ

<><><>

'ಭೂ ಸುರಕ್ಷಾ' ಯೋಜನೆ ಅಡಿ, ದಾವಣಗೆರೆ ಜಿಲ್ಲೆಯಲ್ಲಿ, ಕಂದಾಯ ಇಲಾಖೆ, 1 ಕೋಟಿ 13 ಲಕ್ಷ ಪುಟಗಳಷ್ಟು, ಕಂದಾಯ ದಾಖಲೆಗಳನ್ನು, ಡಿಜಿಟಲೀಕರಣಗೊಳಿಸಿದೆ; ರಾಜ್ಯಕ್ಕೆ ದಾವಣಗೆರೆ ಜಿಲ್ಲೆ, ಮೊದಲ ಸ್ಥಾನದಲ್ಲಿದೆ ಎಂದು, ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರ ಸ್ವಾಮಿ ತಿಳಿಸಿದ್ದಾರೆ. ಪಹಣಿಯೊಂದಿಗೆ ಆಧಾರ ಜೋಡಣೆಯಲ್ಲೂ, ಜಿಲ್ಲೆ ರಾಜ್ಯಕ್ಕೆ ಅಗ್ರ ಸ್ಥಾನದಲ್ಲಿದೆ. ಹಳೆ ಪಹಣಿ, ಮ್ಯುಟೇಷನ್, ಲ್ಯಾಂಡ್ ಗ್ರಾಂಟ್ ರಿಜಿಸ್ಟರ್, ಬಗರ್‌ಹುಕುಂ ಕಡತ ಸೇರಿದಂತೆ, ಭೂಮಿಯ ಎಲ್ಲ ದಾಖಲೆಗಳನ್ನು, ಡಿಜಿಟಲ್ ರೂಪದಲ್ಲಿ ದಾಖಲಿಸಲಾಗಿದೆ, ಎಂದರು.

<><><>

ಕೋಲಾರ ಜಿಲ್ಲೆ, ಟಮಕ ತೋಟಗಾರಿಕೆ ಮಹಾವಿದ್ಯಾಲಯ, ಮೂರು ವಿಶೇ ´ ತಳಿ ಹಲಸು ತಳಿಗಳನ್ನು ಅಭಿವೃದ್ಧಿಪಡಿಸಿದೆ. ಟಮಕದ ಹಲಸು ಸಂಶೋಧನಾ ಕೇಂದ್ರ, ಏಷ್ಯಾದ ಅತಿದೊಡ್ಡ ಸಂಶೋಧನಾ ಕೇಂದ್ರವಾಗಿದ್ದು, ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾಲಯದ ಸಂಲಗ್ನತೆ ಹೊಂದಿದೆ. ಪ್ರದೇಶ ಸಮಾಚಾರಕ್ಕಾಗಿ ಈ ಕುರಿತು ಮಾಹಿತಿ ನೀಡಿದ್ದಾರೆ, ತೋಟಗಾರಿಕೆ ಮಹಾವಿದ್ಯಾಲಯದ, ಹಣ್ಣು ವಿಜ್ಞಾನ ವಿಭಾಗದ, ಸಹಾಯಕ ಪ್ರಾಧ್ಯಾಪಕ ಕೆ.ಎಸ್.ನಾಗರಾಜ.

<><><>

ನಾಗರಾಜ ಕೆ.ಎಸ್ ಧ್ವನಿ 39 ಸೆಕೆಂದುಗಳು

<><><>

ಯಾದಗಿರಿ ಜಿಲ್ಲೆ, ಸುರಪುರ ತಾಲೂಕು, ತಿಪ್ಪನಟಗಿ ಗ್ರಾಮದಲ್ಲಿ, ಕಲುಷಿತ ನೀರು ಸೇವಿಸಿ, 20ಕ್ಕೂ ಹೆಚ್ಚು ಜನ ಅಸ್ವಸ್ಥಗೊಂಡಿದ್ದಾರೆ. ಜಿಲ್ಲಾಡಳಿತ, ವಿವಿಧ ಆಸ್ಪತ್ರೆಗಳಿಗೆ ದಾಖಲಿಸಿ, ಚಿಕಿತ್ಸೆಗೆ ವ್ಯವಸ್ಥೆ ಮಾಡಿದೆ. ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪುರ, ಗ್ರಾಮಕ್ಕೆ ಭೇಟಿ ನೀಡಿ, ನೀರು ಪೂರೈಕೆ ಟ್ಯಾಂಕರ್ ಸ್ವಚ್ಛತೆ ಹಾಗೂ ಗ್ರಾಮದ ನೀರು ಪೂರೈಕೆ ಪೈಪ್ ಪರಿಶೀಲಿಸುವಂತೆ, ಅಧಿಕಾರಿಗಳಿಗೆ ಸೂಚಿಸಿದರು.

<><><>

ಮಹಾತ್ಮ ಗಾಂಧೀಜಿ ಅವರ, ವಾರ್ಧಾ ಆಶ್ರಮದಲ್ಲಿ ಸೇವೆ ಸಲ್ಲಿಸಿದ್ದ, ಹಿರಿಯ ಗಾಂಧೀವಾದಿ, ಮೈಸೂರು ಜಿಲ್ಲೆ, ನಂಜನಗೂಡು ತಾಲೂಕು, ತಗಡೂರಿನ ಶಶಿರೇಖಾ ನಿಧನರಾಗಿದ್ದಾರೆ. ಅವರಿಗೆ 86 ವರ್ಷ ವಯಸ್ಸಾಗಿತ್ತು. ಇಂದು ಬೆಳಗ್ಗೆ 10 ಗಂಟೆಯ ವರೆಗೆ, ತಗಡೂರಿನ ಗಾಂಧಿ ಆಶ್ರಮದಲ್ಲಿ, ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಜೆ.ಎಸ್.ಎಸ್ ಆಸ್ಪತ್ರೆಗೆ ಪಾರ್ಥಿವ ಶರೀರವನ್ನು ದಾನ ಮಾಡಲಾಗುವುದು ಎಂದು, ಕುಟುಂಬ ತಿಳಿಸಿದೆ.

<><><>

ದಕ್ಷಿಣಕನ್ನಡ ಜಿಲ್ಲೆ, ಮೂಡಬಿದಿರೆಯ, ವರ್ಧಮಾನ ಪೀಠದ 2024ನೇ ಸಾಲಿನ, ವರ್ಧಮಾನ ಸಾಹಿತ್ಯ ಪ್ರಶಸ್ತಿಗೆ, ಹಿರಿಯ ಸಾಹಿತಿ, ಉಡುಪಿಯ ಪ್ರೇಮಶೇಖರ ಹಾಗೂ ಉದಯೋನ್ಮುಖ ಸಾಹಿತ್ಯ ಪ್ರಶಸ್ತಿಗೆ, ಹಾವೇರಿಯ ವಿಕಾಸ ಹೊಸಮನಿ ಆಯ್ಕೆಯಾಗಿದ್ದಾರೆ. ಸೆಪ್ಟೆಂಬರ್ ನ ದಸರಾ ಸಾಹಿತ್ಯೋತ್ಸವದಲ್ಲಿ, ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು, ಪೀಠದ ಪ್ರಧಾನ ನಿರ್ದೇಶಕ ನಾ.ಮೊಗಸಾಲೆ ತಿಳಿಸಿದ್ದಾರೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

ಕೊವಿಡ್ ಲಸಿಕೆಯಿಂದ, ಯುವಜನರಲ್ಲಿ ಹೃದಯಾಘಾತ; ಯಾವುದೇ ಆಧಾರವಿಲ್ಲ – ತಜ್ಞರ ಸಮಿತಿ, ವರದಿ.

ಸರ್ಕಾರಿ ಶಾಲಾ ಶಿಕ್ಷಕರ, ಹಾಜರಾತಿ; ಫೇಸ್ ರೀಡಿಂಗ್ ಯೋಜನೆ, 'ಪ್ರತ್ಯಕ್ಷ'ಕ್ಕೆ, ಗದಗನಲ್ಲಿ ಚಾಲನೆ.

ಭೂ ದಾಖಲೆಗಳ ಡಿಜಿಟಲೀಕರಣ; ಭೂ ಸುರಕ್ಷಾ ಯೋಜನೆ ಅನುಷ್ಠಾನದಲ್ಲಿ, ದಾವಣಗೆರೆ ಜಿಲ್ಲೆ, ರಾಜ್ಯಕ್ಕೆ ಪ್ರಥಮ.

ಕೋಲಾರ ಜಿಲ್ಲೆ ಟಮಕದ, ತೋಟಗಾರಿಕೆ ಮಹಾವಿದ್ಯಾಲಯದಿಂದ, ಹಲಸಿನ ಮೂರು ಹೊಸ ತಳಿಗಳ, ಅಭಿವೃದ್ಧಿ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>